ಎಷ್ಟು ಬಿಗಿ ಹಿಡಿದೆವೆಂದುಕೊಂಡರೂ ಮುಚ್ಚಿದ ಮುಷ್ಟಿಯೊಳಗಿಂದ ಸರಿದು ಹೋಗುತ್ತಲೇ ಇರುವ ಕಾಲ, ಎಷ್ಟು ಉಳಿಸಿಕೊಂಡೇವು ಎಂದುಕೊಂಡರೂ ಪೊರೆ ಕಳಚಿ ಹಳೆತನ್ನು ಅಂಚಿಗೆ ಸರಿಸಿ ಹೊಸದಾಗುತ್ತಲೇ ಇರುವ ದೇಶ – ಇವೆರಡರ ಚಲನೆಯಿಂದ ಉಂಟಾಗುವ ತಲ್ಲಣಗಳು, ಬದಲಾವಣೆ ತರುವ ಕ್ಷೋಭೆಗಳು, ಕೊನೆಗೂ ಈ ಕ್ಷಣದಲ್ಲಿ ಕಂಡುಣ್ಣಲು ದಕ್ಕುವ ಬದುಕಿನ ಸೌಂದರ್ಯವನ್ನು ಆಸ್ವಾದಿಸುತ್ತಲೇ ನಿನ್ನೆ ನಾಳೆಗಳ ಆತಂಕವನ್ನು ಮೀರಬೇಕಾದ ಅನಿವಾರ್ಯತೆ ಎಲ್ಲವನ್ನೂ ತನ್ನೊಳಗೆ ಇರಿಸಿಕೊಂಡಿರುವ ಈ ಹಾಡು ಇಡೀ ಸಿನಿಮಾದ ಕಥನಕ್ಕೆ ಬರೆದಿರುವ ಭಾಷ್ಯದಂತೆಯೂ ಕಾಣುತ್ತದೆ.

★★★

'ಥ್ರೀ ಸೀಸನ್ಸ್' ಚಿತ್ರದ ಇನ್ನೊಂದು ದೃಶ್ಯ ಹೀಗಿದೆ:

ಅದು ತಡರಾತ್ರಿ. ನಿರ್ಜನ ಬೀದಿಯಲ್ಲಿ ಹ್ವಾಯ್ ನಿಧಾನಕ್ಕೆ ಸೈಕಲ್ ಓಡಿಸುತ್ತಿದ್ದಾನೆ. ಮುಂದಿನ ಸೀಟಿನಲ್ಲಿ ಲ್ಯಾನ್ ಕೂತಿದ್ದಾಳೆ. ಅವನು ಬಾಡಿಗೆ ಸೈಕಲ್ ಓಡಿಸಿ ಜೀವನ ನಿರ್ವಹಿಸುತ್ತಿರುವವನು. ಅವಳು ದೊಡ್ಡ ದೊಡ್ಡ ಹೋಟೆಲ್‌ಗಳಲ್ಲಿನ ಶ್ರೀಮಂತರ ಜತೆ ಹಣಕ್ಕಾಗಿ ದೇಹ ಹಂಚಿಕೊಳ್ಳುವ ವೇಶ್ಯೆ. ಆ ನಿರ್ಜನ ಬೀದಿ, ಸೈಕಲ್‌ನ ಲಯಬದ್ಧ ಓಟ, ತಣ್ಣನೆ ಗಾಳಿ, ಅನುಭವಕ್ಕೆ ಬರುತ್ತಿರುವ ಆದರೆ ಹೇಳಲಾಗದ ಹಾಗೆ ನಡುವೆ ಆವರಿಸಿಕೊಂಡಿರುವ ಆಳ–ಆಪ್ತ ನಿರ್ವಾತ ಈ ಎಲ್ಲವೂ ಸೇರಿ ಖಾಸಗೀ ಏಕಾಂತವೊಂದು ತಂತಾನೆಯೇ ನಿರ್ಮಾಣಗೊಂಡಿದೆ. ಸುತ್ತಿಸುಳಿಯುವ ತುಸು ಬಿಸಿ ಗಾಳಿಯೂ ಕದಲದಷ್ಟು ಮೆಲ್ಲಗೆ ಶುರುವಾಗುವ ಅವರ ನಡುವಿನ ಮಾತುಕತೆ ಹೀಗೆ ಸಾಗುತ್ತದೆ.

'ವಿಪರೀತ ಸೆಖೆ ಅಲ್ವಾ?'

'ನಂಗೆ ಹುಚ್ಚು ಹಿಡಿದಿದೆ ಅಂತ ನಿನಗನಿಸಬಹುದು. ಆದರೆ ನನಗೆ ಸೆಖೆ ಅಂದ್ರೆ ಇಷ್ಟ.'

'ಏನಂದ್ರಿ?'

'ನನಗೆ ಸೆಖೆ ಅಂದ್ರೆ ಖುಷಿ ಅಂತ ಹೇಳ್ದೆ.'

'ತುಂಬ ಜನರಿಗೆ ಸೆಖೆಯನ್ನು ತಡೆದುಕೊಳ್ಳುವುದು ಕಷ್ಟ.'

'ಸೆಖೆ ಅಂದಾಕ್ಷಣ ನನಗೆ ಶಾಲಾ ದಿನಗಳು ನೆನಪಾಗ್ತವೆ. ಆಗ ನಾನು ಲಂಗದಾವಣಿ ಹಾಕಿಕೊಂಡು ಶಾಲೆಗೆ ಹೋಗ್ತಿದ್ದೆ. ನಮ್ಮ ಶಾಲೆಯ ಹತ್ತಿರವೇ ಗುಲ್‌ಮೊಹರ್ ಸಾಲುಮರಗಳಿದ್ದವು. ಬೇಸಿಗೆಯಲ್ಲಿ ಅವು ಗುಲ್‌ಮೊಹರ್ ಹೂವಿನಿಂದ ಮೈದುಂಬಿಕೊಳ್ಳುತ್ತಿದ್ದವು. ನಾವು ಹುಡುಗಿಯರು ಆ ಮರದಡಿಯಲ್ಲಿ ತುಂಬ ಹೊತ್ತು ಕಾದು ಕೂತಿದ್ದು, ಹೂ ಬಿದ್ದ ಕೂಡಲೇ ಹೆಕ್ಕಿ ಮುಡಿದುಕೊಳ್ಳುತ್ತಿದ್ದೆವು. ನಮ್ಮ ಅದೃಷ್ಟ ಚೆನ್ನಾಗಿದ್ದರೆ ಯಾವುದಾದರೂ ಹುಡುಗ ಹೂ ಕಿತ್ತು ನಮ್ಮ ಕೈಗಿಡುತ್ತಿದ್ದ. ನಾವು ಆ ಹೂವನ್ನು ಪುಸ್ತಕದ ಮಧ್ಯ ಇಟ್ಟು ಒಣಗಿಸುತ್ತಿದ್ದೆವು. ಹಾಗೆ ಮಾಡಿದರೆ ಆ ಹೂ ಕೊಟ್ಟ ಹುಡುಗ ಯಾವತ್ತೂ ನಮ್ಮ ನೆನಪಿನಲ್ಲಿರುತ್ತಾನೆ ಎಂಬ ನಂಬಿಕೆಯಿತ್ತು...'

'ನಿಮಗೆ ಹಾಗೆ ತುಂಬ ಹುಡುಗರು ಹೂ ಮುಡಿಸಿರಬೇಕು ಅಲ್ವಾ?'

(ಕೊಂಚ ಹೊತ್ತು ಮೌನ... ಮತ್ತೆ ಹ್ವಾಯ್ ಆ ರಾತ್ರಿಯಿಂದಲೇ ಧೈರ್ಯವನ್ನು ಎರವಲು ಪಡೆದವನಂತೆ ಮಾತು ಮುಂದುವರಿಸುತ್ತಾನೆ)

'ಮಿಸ್... ನೀವು ಎಷ್ಟು ಹಣ ತಗೋತೀರಿ?'

'ಯಾಕೆ?'